


ಗ್ಯಾರಂಟಿ ಇದ್ದಾರಲ್ಲ' ಎಂದೆಲ್ಲಾ ಉದ್ದುದ್ದ ಭಾಷಣ ಬಿಗಿದಿದ್ದಳು.

ಮೊದಲು ಒಂದೆರಡು ತಿಂಗಳು ತಾನು ಉಳಿಸಿದ ಸಂಬಳದ ಹಣದಿಂದ ಗೀತಾ ತುಂಬಾ ದಿನಗಳಿಂದ ಆಸೆ ಪಟ್ಟಿದ್ದ ಇಟ್ಟಿಗೆ ಬಣ್ಣದ ಮೈಸೂರು ಸಿಲ್ಕ್ ಸೀರೆ, ಮಗಳಿಗೆ ಒಂದು ಜೊತೆ ಪುಟ್ಟ ಕಿವಿಯೋಲೆ, ಮಗನಿಗೆ ಹೊಸ ಕ್ರಿಕೆಟ್ ಸೆಟ್ ಕೊಂಡು ಸಂಭ್ರಮಿಸಿದ್ದಳು. ನನಗೂ ಒಳಗೊಳಗೆ ಇದು ಒಳ್ಳೆಯ ಡೀಲ್ ಎನಿಸಿದರೂ ಮಕ್ಕಳ ಭವಿಷ್ಯಕ್ಕಾಗಿ ಉಳಿಸಿರುವ ಹಣ ಬ್ಯಾಂಕಿನ ಎಫ್.ಡಿ.ಯಲ್ಲೇ ಕ್ಷೇಮ ಎನಿಸಿ ಸುಮ್ಮನಾಗಿದ್ದೆ. ಅಷ್ಟೇ ಅಲ್ಲದೆ, ಬಡ್ಡಿಗೆ ಹಣ ಕೊಡುವುದರಲ್ಲಿದ್ದ ರಿಸ್ಕನ್ನೂ ಅವಳಿಗೆ ಪರಿಪರಿಯಾಗಿ ವಿವರಿಸಿದ್ದೆ. ಗೀತಾ ನನ್ನ ವಿಚಾರಗಳನ್ನು 'ವಿಪರೀತ ಯೋಚನೆಗಳು' ಎಂದು ನಕ್ಕು ಸುಮ್ಮನಾಗಿದ್ದಳು. ಆ